# ಸೃಷ್ಟಿಯ ಅದ್ಭುತಗಳು - ಹಕ್ಕಿಗರಿಯ ಅದ್ಭುತ ರಚನೆ

ಸಂಗ್ರಹ : ಸುನಯನ ವಾಲ್ಟರ್ಸ್



*"ಉಷ್ಟ್ರಪಕ್ಷಿಯು ರೆಕ್ಕೆಬಡಿಯುತ್ತಾ ನೀಳವಾಗಿ ಓಡುವ ಸಮಯದಲ್ಲಾದರೋ ಕುದುರೆಯನ್ನೂ ಸವಾರನನ್ನೂ ಹಿಯಾಳಿಸುವನು"* – (ಯೋಬ 39:18). *"ಗಿಡುಗವು ತನ್ನ ರೆಕ್ಕೆಗಳನ್ನು ಹರಡಿ ತೆಂಕಣ ದಿಕ್ಕಿಗೆ ಹಾರುವುದು ನಿನ್ನ ವಿವೇಕದಿಂದಲೋ?"* (ಯೋಬ 39:26).

ಹಕ್ಕಿಯ ಗರಿಯು ಎಷ್ಟು ಹಗುರವಾಗಿದೆಯೋ ಅಷ್ಟೇ ದೃಢವಾಗಿದೆ. ಸುಂದರವಾದ ಬಣ್ಣಗಳಿಂದ ಕಂಗೊಳಿಸುವ ಜೊತೆಗೇ ಹಾರುವುದಕ್ಕೂ, ಬೆಚ್ಚನೆಯ ಉಷ್ಣತೆಯನ್ನು ಕಾದುಕೊಳ್ಳಲೂ ಪಕ್ಷಿಗಳಿಗೆ ಅವುಗಳು ಬೇಕು.

ಗರಿಯ ಮುಖ್ಯ ಕಾಂಡವು ಪೊಳ್ಳಾದ ಮತ್ತು ಬಲವಾದ ಭಾಗವಾಗಿದ್ದು, ಬುಡದಲ್ಲಿ ದಪ್ಪವಾಗಿದ್ದು ತುದಿಗೆ ಹೋದಂತೆಲ್ಲಾ ಸಪೂರವಾಗುತ್ತದೆ. ಇಂತಹ ಪ್ರತಿಯೊಂದು ಕಾಂಡದಲ್ಲಿ ಸುಮಾರು 600 ಶಾಖೆಗಳಿದ್ದು, ಪ್ರತಿಯೊಂದು ಶಾಖೆಯಲ್ಲಿ ಸುಮಾರು 800 ಉಪಶಾಖೆಗಳಿರುತ್ತವೆ. ಹೆಚ್ಚಿನ ಗರಿಗಳಲ್ಲಿ ಈ ಉಪಶಾಖೆಗಳ ತಳದಲ್ಲಿ ಕೊಕ್ಕೆಗಳಂತಹ ರಚನೆ ಇದ್ದು ಅದನ್ನು ಅದನ್ನು ಭದ್ರಪಡಿಸಲು ಮೇಲೆ ಹೊರಚಾಚಿರುವ ಅಂಚು ಇರುತ್ತದೆ. ಒಂದು ಗರಿಯಲ್ಲಿ ಸುಮಾರು 30 ಮಿಲಿಯದಷ್ಟು ಇಂತಹ ರಚನೆ ಇರುತ್ತದೆ. ಶಕ್ತಿಶಾಲಿ ಸೂಕ್ಷ್ಮದರ್ಶಕದ ಮೂಲಕ ಈ ರಚನೆಗಳನ್ನು ಲೆಕ್ಕ ಹಾಕಿದರೆ, ಒಂದು ಪಕ್ಷಿಯಲ್ಲಿ ನೂರು ಬಿಲಿಯದಷ್ಟು ರಚನೆಗಳನ್ನು ನಾವು ಕಾಣಬಹುದು. ಎಷ್ಟೊಂದು ಅದ್ಭುತವಲ್ಲವೆ?

ಪಕ್ಷಿಗಳು ಹಾರಲು ರೆಕ್ಕೆ ಹರಡಿದಾಗ, ಗರಿಗಳು ಒಂದಕ್ಕೊಂದು ಬೆಸೆದುಕೊಂಡು ಬೀಸಣಿಗೆಯಂತಹ ರಚನೆ ಏರ್ಪಡುತ್ತದೆ. ಆದರೆ ಗಾಳಿಯಲ್ಲಿ ಹಕ್ಕಿಯು ಹಾರುವಾಗ ದಿಕ್ಕು ಬದಲಿಸುವ ಸಮಯದಲ್ಲಿ, ಒಂದು ಅಥವಾ ಹೆಚ್ಚಿನ ಗರಿಗಳಲ್ಲಿ ಈ ಕೊಕ್ಕೆಗಳು ಸಡಿಲವಾಗುತ್ತವೆ. ಈ ಯಾವ ಚಲನೆಯನ್ನೂ ಹಕ್ಕಿಗಳು ತಿಳಿದು ಮಾಡುವುದಿಲ್ಲ. ಅವುಗಳು ದೇವರಿಂದಲೇ ಸೃಷ್ಟಿಸಲ್ಪಟ್ಟ ಅದ್ಭುತ ನಿಯಂತ್ರಣಗಳು.

ಬಾಲದ ಗರಿಗಳು ಈ ರೀತಿಯ ರಚನೆ ಪಡೆದಿರುವುದಿಲ್ಲ. ಕೆಲವು ಪಕ್ಷಿಗಳಿಗೆ 10–12 ಬಾಲದ ಗರಿಗಳಿದ್ದರೆ, ಕೆಲವು ಪಕ್ಷಿಗಳಿಗೆ ಒಂದು ಸಾವಿರದಷ್ಟಿರುತ್ತವೆ. ಇವು ಬೇರೆ ಬೇರೆ ಮಾಂಸಪೇಶಿಗಳಿಂದ ಬಂಧಿಸಲ್ಪಟ್ಟಿದ್ದು, ಪ್ರತ್ಯೇಕವಾಗಿ ಚಲಿಸಬಲ್ಲವು. ಬೇರೆ ಬೇರೆ ಜಾತಿಯ ಪಕ್ಷಿಗಳಿಗೆ ಬೇರೆ ಬೇರೆ ಬಣ್ಣದ ಗರಿಗಳಿರುವುದಂತೂ ನಮಗೆ ತಿಳಿದಿದೆ. ಈ ಸೃಷ್ಟಿಯ ಅದ್ಭುತಗಳನ್ನು ಅವಲೋಕಿಸಿದಾಗ, ನಮಗೆ ಕೀರ್ತನೆ 150:2ರ ನೆನಪು ಬರುತ್ತದೆ – *"ಆತನ ಮಹತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಿರಿ. ಆತನ ಮಹಾಪ್ರಭಾವಕ್ಕೆ ಸರಿಯಾಗಿ ಆತನನ್ನು ಸ್ತುತಿಸಿರಿ."* ಆತನು ನಮ್ಮ ರಕ್ಷಕನೆಂದು ನಮಗೆ ತಿಳಿದಿರುವಾಗ ನಾವು ಇನ್ನೂ ಹೆಚ್ಚಾಗಿ ಆತನನ್ನು ಸ್ತುತಿಸಬೇಕು.

*ಆದುದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ* (ಇಬ್ರಿಯ 13:15). ■

## ಕರ್ತನಲ್ಲಿ ನಿದ್ದೆ ಹೋದರು

ಬಹಳ ಕ್ರಮವಾಗಿ "ತುತ್ತುಗಳು" ಪತ್ರಿಕೆಯ ವಾಚಕರೂ ಮತ್ತು "ಬುದ್ಧಿಗೊಂದು ಕಸರತ್"ಗೆ ಉತ್ತರಿಸುತ್ತಿದ್ದವರೂ ಆದ ಮೈಸೂರಿನ ಶ್ರೀಮತಿ ಸುಶೀಲಾ ಸೌಭಾಗ್ಯ ಚೇಲಿಯವರು 21-03-2011ರಂದು ಕರ್ತನೊಟ್ಟಿಗೆ ಇರಲು ಇಹಲೋಕ ತ್ಯಜಿಸಿದ್ದಾರೆ. ಅವರ ಕುಟುಂಬ ವರ್ಗದವರಿಗೆ "ತುತ್ತುಗಳು" ಸಂಪಾದಕ ವರ್ಗ ಹಾಗೂ ಇಡೀ "ತುತ್ತುಗಳು" ವಾಚಕರ ಸಾಂತ್ವನಗಳು.